# ಬಿಡಿಸಲು ಬಂದವರು

ಈಚೆಗೆ ನಟರಾಜ ಸಿಕ್ಕಿದ. ಹೋಟೆಲಿಗೆ ಹೋಗಿ ಕುಳಿತು ನಮಗಿಬ್ಬರಿಗೂ ಇಷ್ಟವಾದ ಗೆಣಸಿನ ಭಜಿ ತಿನ್ನುತ್ತ ಸ್ವಲ್ಪ ಹೊತ್ತು ಕಾಲ ಕಳೆದೆವು. ಈಚೀಚೆಗೆ ಅವನು ಸಿಗುತ್ತಿದ್ದುದೇ ಅಪರೂಪವಾಗಿ ಬಿಟ್ಟಿತ್ತು. ದೊಡ್ಡ ನಟನಾಗಿ ಹೋಗಿದ್ದ ಅವನು. ಒಳ್ಳೇ ನಟ. ಮೊದಲು ಅವನು ರಂಗಪ್ರವೇಶ ಮಾಡಿದುದು ನಾಟಕದಲ್ಲಿ. ಆರಂಭದಲ್ಲೇ ಅವನು ಹೆಸರು ಮಾಡಿಕೊಂಡಿದ್ದ. ಆದರೂ ನಾಟಕ ಎಂದಮೇಲೆ ಅದರಲ್ಲಿ ಸಿಗುವ ಜನಪ್ರಿಯತೆಗೆ ಒಂದು ಮಿತಿಯಿದೆ. ನಂತರ ನಟರಾಜ ಸಿನಿಮಾ ಪ್ರವೇಶ ಮಾಡಿದ. ನಂತರ ಅವನ ಅದೃಷ್ಟ ಒಮ್ಮೆಲೆ ಖುಲಾಯಿಸಿತು. ಮೊದ ಮೊದಲು ಹೀರೋನ ತಮ್ಮನೋ ಗೆಳೆಯನೋ ಆಗಿದ್ದವನು ಬೇಗನೆ ತಾನೇ ಹೀರೋ ಆಗಿಬಿಟ್ಟ. ಸದ್ಯ ಅವನ 'ಶ್ರಾವಣ' ಎಂಬ ಹೆಸರಿನ ಸಿನಿಮಾ ಬಹಳಷ್ಟು ಜನಪ್ರಿಯವಾಗಿ ಅವನಿಗೆ ಶ್ರಾವಣ ನಟರಾಜ ಎಂಬ ಉಪಾಧಿ ಬಂದಿತ್ತು. ಅವನಿಗೊಂದು ಅಭಿಮಾನಿ ಬಳಗವೂ ಹುಟ್ಟಿಕೊಂಡಿತ್ತು. ಅಲ್ಲಲ್ಲಿ ಶ್ರಾವಣ ನಟರಾಜ ಅಭಿಮಾನಿ ಬಳಗಗಳನ್ನು ಕಟ್ಟಿಕೊಂಡು ಜನ ಓಡಾಡುತ್ತಿದ್ದರು. ಕೆಲವು ಥಳುಕು ಬಳುಕಿನ ನಟಿಯರ ಜತೆ ಅವನ ಹೆಸರು ಆಗಾಗ ಕೇಳಿಬರುತ್ತಿತ್ತು ಕೂಡ. ಆದರೆ ನಟರಾಜನ ಅದೃಷ್ಟಕ್ಕೆ ಅವನಿಗೆ ಈಗಾಲೇ ಮದುವೆಯಾಗಿದ್ದು ಸಂಸಾರಸ್ಥನಾಗಿದ್ದ. ಆದರೆ ಅವನ ವಯಸ್ಸು ಮೂವತ್ತು ಮುಟ್ಟಿದ್ದರೂ ಅಂಗ ಸೌಷ್ಟವ ಇನ್ನೂ ಇಪ್ಪತ್ತರಲ್ಲಿ ಇದ್ದುದರಿಂದ ಈಗ ತಾನೆ ಮೀಸೆ ಮೂಡಿದವನಂತೆ ಕಾಣಿಸುತ್ತಿದ್ದ. ನಮ್ಮ ಮಾತು ಅವನ ಜನಪ್ರಿಯತೆಯ ಸುತ್ತಲೇ ತಿರುಗುತ್ತಿತ್ತು. ನಿನ್ನ ಅದೃಷ್ಟ ಕಣೋ, ಕೇವಲ ನಾಟಕರಂಗದಲ್ಲಿ ಇರುತ್ತಿದ್ದರೆ ಈ ತರ ಜನಪ್ರಿಯತೆ ಸಿಗುತ್ತಿರಲಿಲ್ಲ ಎಂದೆ ನಾನು. ಅದಕ್ಕವನು, ಆದರೆ ಇಂಥ ಜನಪ್ರಿಯತೆ ಕೆಲವು ಸಲ ಗಂಡಾಂತರಗಳನ್ನೂ ತರುತ್ತದೆ ಎಂದು ಉದಾಹರಣೆಯೊಂದನ್ನು ನೀಡಿದ.

ಒಮ್ಮೆ ಅವನು ನಗರದ ಹೊರವಲಯದಲ್ಲಿ ಆಟೊ ಹಿಡಿಯಬೇಕಾಗಿತ್ತು. ಆಗಲೇ ಅವನ ಕೈಯಲ್ಲಿ ಸಾಕಷ್ಟು ದುಡ್ಡು ಓಡಾಡುತ್ತಿದ್ದು, ಒಂದು ಕಾರನ್ನು ಖರೀದಿಸಬಹುದಾಗಿದ್ದರೂ, ಅವನು ಸರಳ ಜೀವನವನ್ನು ಬಯಸುತ್ತಿದ್ದುದರಿಂದ ತ್ರಿಚಕ್ರ ವಾಹನಗಳಲ್ಲೇ ಸಂಚರಿಸುತ್ತಿದ್ದ. ಆಟೊ ಚಾಲಕರು ಅವನನ್ನು ಕಂಡದ್ದೇ ಬಂದು ಮುತ್ತಿಕ್ಕುತ್ತಿದ್ದರು. ಹತ್ತಿ ಕುಳಿತರೆ ಮಾತಿಗೆ ಕೊನೆಯಿಲ್ಲ. ಅದೇನು ಡಯಲಾಗು ಸಾರ್, 'ಪರಮಾತ್ಮ'ದಲ್ಲಿ. ಎಕ್ಕಡಾ ನನ್ಮಗ, ಎಕ್ಕಡಾ ನಿನ್ನಮ್ಮ, ಎಕ್ಕಡಾ ನಿನ್ನಪ್ಪ, ಎಕ್ಕಡಾ ನಿನ್ನ ಅಜ್ಜ ಪಿಜ್ಜ, ಮುತ್ತಜ್ಜ... ಆಹಾ! ನನ್ಮಗ ಅದನ್ನ ಎಷ್ಟು ಚಂದಾಗಿ ಹೇಳ್ತಾನೆ ಸಾರ್, ನಿಮ್ಮ ಹಾಗೇ, ಎನ್ನುತ್ತಿದ್ದರು. ಆದರೆ ಅಂಥ ಭಾಷೆ ಒಗ್ಗದ ನಟರಾಜ ಅದನ್ನು ಹೇಳಲು ಪಟ್ಟ ಕಷ್ಟ ಈ ಚಾಲಕರಿಗೇನು ಗೊತ್ತು? "ಎಕ್ಕಡದ ಕುರಿತು ನನಗೆ ತಿರಸ್ಕಾರ ಏನೂ ಇಲ್ಲ; ತಲೆಗೆ ಶಿರಸ್ತ್ರಾಣ ಇದ್ದ ಹಾಗೆ ಕಾಲಿಗೆ ಎಕ್ಕಡ. ಆದರೆ ಮನುಷ್ಯರನ್ನು ಎಕ್ಕಡವೆಂದು ಕರೆಯುವುದು ನನಗೆ ಕಷ್ಟ ಎನಿಸುತ್ತಿತ್ತು," ಎಂದ ನಟರಾಜ. ಅದಕ್ಕೆ ನಿರ್ದೇಶಕ ಪುಣ್ಯಾತ್ಮ ಒಂದು ಪರಿಹಾರ ಸೂಚಿಸಿದನಂತೆ. "ಒಂದು ಕೆಲ್ಸ ಮಾಡಿ ಸಾರ್: ಎಕ್ಕಡ ತೆಲುಗು ಅಂತ ತಿಳ್ಕೊಳ್ಳಿ. ಎಕ್ಕಡ ಎಂದರೆ ತೆಲುಗಿನಲ್ಲಿ ಎಲ್ಲಿ ಎಂದು ಅರ್ಥ. ನಿನ್ನಪ್ಪ ಎಕ್ಕಡ ಎಂದರೆ ನಿನ್ನ ಅಪ್ಪ ಎಲ್ಲಿ ಅಂತ ಅಷ್ಟೆ."

'ಅಶ್ವತ್ಥಾಮ'ದಲ್ಲಿ ನೀವು ಖಳರನ್ನು ಒದ್ದು ನೆಲಕಚ್ಚಿಸುವ ಸೀನು ಮರೆಯುವುದಕ್ಕೆ ಸಾಧ್ಯವಾ?